

ನಾವು ಸಂಗಾತಿಯನ್ನು ಆರಿಸಿಕೊಳ್ಳುವಾಗ ಸಮಸ್ಯೆಗಳನ್ನೂ ಆರಿಸಿಕೊಳ್ಳುತ್ತೇವೆ!

ಡಾ.ವಿನೋದ ಛೆಬ್ಬಿ

# ಆಯ್ಕೆಯಲ್ಲೇ ಅಯೋಮಯ

4

ಹೆಣ್ಣುಗಂಡುಗಳು ಪರಸ್ಪರರನ್ನು ಯಾವ ಆಧಾರದ ಮೇಲೆ ಆಯ್ಕೆ ಮಾಡಿಕೊಳ್ಳುತ್ತಾರೆ?

ಉತ್ಕೃಷ್ಟ ಹೊರನೋಟ: ಹುಡುಗ ಹುಡುಗಿ ಪರಸ್ಪರ ಭೇಟಿಯಾಗುವಾಗ ಮೊದಲನೋಟಕ್ಕೆ ಕಂಡದ್ದನ್ನೇ ಮೆಚ್ಚಿ ಮರುಳಾಗುತ್ತಾರೆ ಎಂಬುದು ಎಲ್ಲರಿಗೂ ಗೊತ್ತು. ಹುಡುಗನಿಗೆ ಸಾಮಾನ್ಯವಾಗಿ ಹುಡುಗಿಯ ಮೈಮಾಟ, ನಿಲುವು–ಚೆಲುವು, ಮಾತುಕತೆ, ಅದರೊಡನೆ ವಿದ್ಯೆ ಹಾಗೂ ಮನೆತನ ಇಷ್ಟಿದ್ದರೆ ಸಾಕೇ ಸಾಕು. ಇನ್ನು, ಹುಡುಗಿಯಾದರೆ ಹುಡುಗನ ಮೈಕಟ್ಟು, ವಿದ್ಯೆ, ಸಂಪಾದನೆ, ಇದರ ಜೊತೆಗೆ ಮಾತುಕತೆ, ರೀತಿನಡವಳಿಕೆ ಇತ್ಯಾದಿ ನೋಡುತ್ತಾಳೆ. ಕೆಲವೊಮ್ಮೆಯಂತೂ ಸಂಗಾತಿಯನ್ನು ಆರಿಸಿಕೊಳ್ಳಲು ಒಂದೇ ಒಂದು ವಿಷಯವೇ ಸಾಕು. ಉದಾಹರಣೆಗೆ, ಹುಡುಗ ಅಮೆರಿಕೆಯಲ್ಲಿ ವಾಸವಾಗಿದ್ದಾನೆ (ಆರ್ಥಿಕ ಭದ್ರತೆ), ಅಥವಾ ಹುಡುಗಿ ಮೈಮಾಟದ ಚೆಲುವೆ (ಸಂತಾನೋತ್ಪತ್ತಿಯ ಭರವಸೆ) ಅಂದರೆ ಸಾಕು, ಇನ್ನಿತರ ಗುಣಾವಗುಣಗಳನ್ನು ಗಮನಿಸುವುದೇ ಇಲ್ಲ. ಹಾಗೆಯೇ ಇಬ್ಬರೂ ಡಾಕ್ಟರ್ ಅಥವಾ ಎಂಜನಿಯರ್ ಅಂಥ ಒಂದೇ ವೃತ್ತಿಗೆ (ಸ್ನೇಹ) ಸಂಬಂಧಪಟ್ಟರೂ ಸರಿ, ಒಪ್ಪಲು ಅದೇ ಮುಖ್ಯ ಕಾರಣವಾಗುತ್ತದೆ. ಆದರೆ ಈ ಭರದಲ್ಲಿ ತನಗೆ ಅಡ್ಡಿಯಾಗುವ ವ್ಯಕ್ತಿತ್ವ ದೋಷಗಳನ್ನು ಹಾಗೂ ಇತರ ಅಂಶಗಳನ್ನು (ಉದಾ. ಆರ್ಥಿಕ ಭದ್ರತೆ ಅಥವಾ ಮೈಮಾಟದ ಚೆಲುವಿನ ಅರಿವು ಇರುವವರು ಸಂಗಾತಿಯೊಡನೆ ಸುಲಭವಾಗಿ ಹೊಂದಾಣಿಕೆ ಮಾಡಿಕೊಳ್ಳುತ್ತಾರೆಯೆ?) ಅಲಕ್ಷಿಸುವ ಸಂಭವವಿದೆ. ಆದುದರಿಂದ ಕೇವಲ ಹೊರನೋಟಕ್ಕೆ ಮರುಳಾಗಿ ಮದುವೆಯಾಗುವುದೆಂದರೆ ಆಕರ್ಷಕ ಪ್ಯಾಕೇಜ್‌ಗೆ ಮರುಳಾಗಿ ಕಳಪೆ ಮಾಲು ಕೊಂಡಂತೆ– ಎಷ್ಟಾದರೂ ಇದು ಜಾಹೀರಾತುಗಳ ಜಗತ್ತು!

ಸಂಗಾತಿಯ ಆಯ್ಕೆಗೂ ಮುಂಬರುವ ಸಮಸ್ಯೆಗಳಿಗೂ ಸಂಬಂಧವಿದೆಯೇ ಎಂದು ಕೆಲವು ದೃಷ್ಟಾಂತಗಳ ಮೂಲಕ ನೋಡೋಣ.

ಉದಾಹರಣೆಗೆ, ನನ್ನ ಬಳಿ ಬಂದ ರತೀಶ–ರಮಾ (ಇಲ್ಲಿ ಬರುವ ಎಲ್ಲ ವ್ಯಕ್ತಿಗಳು ನಿಜವಾಗಿದ್ದರೂ ಹೆಸರುಗಳನ್ನು ಬದಲಾಯಿಸಲಾಗಿದೆ.) ದಂಪತಿಯನ್ನೇ ತೆಗೆದುಕೊಳ್ಳಿ. ರತೀಶ ರಮಾಳನ್ನು ಆರಿಸಿಕೊಂಡ. ಯಾಕೆ? ಅವಳ ನೇರಮಾತು ಹಾಗೂ ಪ್ರಾಮಾಣಿಕ ಸ್ವಭಾವವು ಅವನಿಗೆ ಇಷ್ಟವಾಗಿತ್ತು. ಈಗ ಅವಳು ಅವನಿಗೆ ಇಷ್ಟವಿಲ್ಲ. ಯಾಕೆ? ಇವನ ತಪ್ಪುಗಳನ್ನು ಆಕೆ ನೇರವಾಗಿ ಎತ್ತಿತೋರಿಸುತ್ತಾಳೆ, ಹಾಗೂ ಇವನ ನಿರ್ಧಾರಗಳಲ್ಲಿ ಆಕೆಗೆ ಅಪ್ರಾಮಾಣಿಕತೆ ಎದ್ದುತೋರುತ್ತಿದೆ! ಹಾಗೆಯೇ, ಅನನ್ಯಳ ಅನನ್ಯ ಚೆಲುವಿಗೆ ಒಲಿದು ವರಿಸಿದ ಅರ್ಜುನ ಈಗ ವಿಷಾದಯೋಗದಲ್ಲಿದ್ದಾನೆ. ಯಾಕೆ? ಅವಳ ಅಲಂಕಾರ, ಬಟ್ಟೆಬರೆಗೆ ಇವನ ಸಂಬಳ ಸಾಲದೆಂದು ಸಾಲ ಮಾಡಿದ್ದಾನೆ. ಸಾಕಾಗದ್ದಕ್ಕೆ ಇವನ ಕೃಷ್ಣವರ್ಣದ ಬಗೆಗೆ ಅವಳ ಕೊಂಕುಮಾತು ಬೇರೆ. ಇನ್ನು, ಕೆಲವೊಮ್ಮೆ ಆಯ್ಕೆಗೆ ಕಾರಣೀಭೂತವಾದ ಗುಣವಿಶೇಷಗಳನ್ನೇ ನಂತರ ತಿರಸ್ಕರಿಸುವವರೂ ಇದ್ದಾರೆ. ರತಿ ಅತ್ಯುತ್ತಮ ನೃತ್ಯಗಾತಿ ಎಂದು ಮೆಚ್ಚಿ ಮದುವೆಯಾದ ರವಿ, ನಂತರ ಅವಳನ್ನು ನೃತ್ಯಪ್ರದರ್ಶನಕ್ಕೆ ಕಳಿಸುತ್ತಿಲ್ಲ. ಯಾಕೆ? ತನ್ನ ಹೆಂಡತಿ ಎಲ್ಲರೆದುರು ಕುಣಿಯುವುದು ಅವನಿಗೆ ಬೇಕಿಲ್ಲ! ಹಾಗೆಯೇ ಅಬ್ದುಲ್ಲಾನ ಸಾಹಸ ಪ್ರವೃತ್ತಿಯನ್ನು ಮೆಚ್ಚಿ ಮದುವೆಯಾದ ಆಯೇಷಾ ಅವನ ಯಾವ ಸಾಹಸಗಳಿಗೂ ಬಿಡುತ್ತಿಲ್ಲ. ಯಾಕೆ? ಸಾಹಸ ದುಸ್ಸಾಹಸವಾಗಿ ಅಬ್ದುಲ್ಲಾ ಅಲ್ಲಾನಿಗೆ ಪ್ರಿಯವಾದರೆ?

ಅಂದರೆ ನಮ್ಮ ಆಯ್ಕೆಗಳೇ ಹೆಚ್ಚಿನ ಮಟ್ಟಿಗೆ ದಾಂಪತ್ಯ ಸಮಸ್ಯೆಗಳಿಗೆ ಹಾದಿ ಮಾಡಿಕೊಡುತ್ತವೆ! ಇದನ್ನು ಇನ್ನೂ ಸ್ಪಷ್ಟವಾಗಿ ಅರ್ಥಮಾಡಿಕೊಳ್ಳೋಣ.

ಸಂಗಾತಿಯ ಜೊತೆ ಸಮಸ್ಯೆಗಳ ಆಯ್ಕೆ: ದಾಂಪತ್ಯ ವಿರಸದ ಮೂಲವನ್ನು ಇನ್ನೂ ಸ್ವಲ್ಪ ಕೆದಕಿದರೆ ಒಂದು ನಂಬಲಾರದ ಮನೋವೈಜ್ಞಾನಿಕ ಸತ್ಯ ಗೋಚರಿಸುತ್ತದೆ. ಅಮೆರಿಕೆಯ ಪ್ರಸಿದ್ಧ ದಾಂಪತ್ಯ ತಜ್ಞ ಡಾನ್ ವೈಲ್ ಪ್ರಕಾರ, ನಾವು ಸಂಗಾತಿಯನ್ನು ಆರಿಸಿಕೊಳ್ಳುವುದರ ಜೊತೆ ಕೆಲವು ಸಮಸ್ಯೆಗಳನ್ನೂ ಆರಿಸಿಕೊಳ್ಳುತ್ತೇವೆ!

ಉದಾ: ಸುರೇಶ ಸುಷ್ಮಾ ಪ್ರೀತಿಸಿ ಮದುವೆಯಾಗಿದ್ದಾರೆ. ಸುಷ್ಮಾ ಮನೆಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡುತ್ತಾಳೆ. ಆದರೆ ಎಲ್ಲಾದರೂ ಶಾಪಿಂಗ್, ಹೋಟೆಲ್ ಅಥವಾ ಪಾರ್ಟಿಗೆಂದು ಹೊರಗೆ ಹೋಗಬೇಕಾದಲ್ಲಿ ಆಕೆ ತಯಾರಾಗಲು ತೀರ ತಡಮಾಡುತ್ತಾಳೆಂದು ಅವಳನ್ನು ಟೀಕಿಸುತ್ತಿರುತ್ತಾನೆ. ಹೊರಹೋಗುವ ಮುಂಚೆ ಸುಷ್ಮಾ ಮನೆಗೆಲಸಗಳನ್ನು ಮುಗಿಸಿ, ನಂತರ ಮುಖ ತೊಳೆದು ಅಲಂಕರಿಸಿಕೊಳ್ಳಲು ಕೂಡುತ್ತಾಳೆ. ಅದಕ್ಕೆಂದೇ ಅವಳು ಹೊರಡುವುದು ತಡವಾಗುತ್ತದೆ. ಅವಳು ತಯಾರಾಗುವ ಊರ ಮುಂಚೆಯೇ ಇವನು ತಯಾರಾಗಿ ಬಾಗಿಲಲ್ಲಿ ನಿಂತುಕೊಂಡು ಅವಳನ್ನು ಆಕ್ಷೇಪಿಸುತ್ತಾನೆ. ಹಾಗೆಂದು ಅವಳು ಮನೆಗೆಲಸ ಬೇಗ ಮುಗಿಸಲು ಇವನ ಸಹಾಯ ಕೇಳಿದರೆ ಇವನು ಗೃಹಿಣಿ ನೀನೋ ನಾನೋ ಎಂದು ಪ್ರಶ್ನಿಸುತ್ತಾನೆ. ವಿಚಿತ್ರವೆಂದರೆ ಸುರೇಶ ತನ್ನ ಸಹಪಾಠಿ ಮಹಿಮಾಳನ್ನು ಮದುವೆಯಾಗಬಹುದಾಗಿತ್ತು. ಯಾಕೆಂದರೆ ಮಹಿಮಾಳಿಗೆ ಮನೆಯ ಹೊರಗಿನ ಜೀವನ ಎಂದರೆ ಪ್ರಾಣ– ಅವಳಾದರೋ ಇವನಿಗಿಂತ ಮುಂಚೆಯೇ ತಯಾರಾಗಿಬಿಡುತ್ತಿದ್ದಳು. ಆದರೆ ಆಕೆ ತನ್ನ ಅಲಂಕಾರದ ಭರದಲ್ಲಿ ಮನೆಯ ಅಚ್ಚುಕಟ್ಟನ್ನು ಅಲಕ್ಷಿಸುವಳೆಂಬ ಭಯವಿತ್ತು. ಅಚ್ಚುಕಟ್ಟಿನ ಮನೆ ಸುರೇಶನಿಗೆ ಬಹುಪ್ರಿಯ; ಅದು ಅವನ ಆದ್ಯತೆಯ ಸಂಕೇತವೂ ಹೌದು. ಅಥವಾ ಸುರೇಶ ಸಮಯ ಪರಿಪಾಲನೆ ಮಾಡುವ ಸುನೀತಾಳನ್ನು ಮದುವೆಯಾಗಬಹುದಿತ್ತು. ಆದರೆ ಸುನೀತಾಗೆ ತನ್ನ ಗಂಡ ಆಲಸಿಯಾಗಿ ಬಿದ್ದುಕೊಂಡಿರುವುದು ಇಷ್ಟವಿಲ್ಲ. ಅವನು ಏನಾದರೂ ಮಾಡಲು, ಕೊನೆಯ ಪಕ್ಷ ವ್ಯಾಯಾಮವನ್ನಾದರೂ ಮಾಡಲು ಅವಳು ಒತ್ತಾಯಿಸುತ್ತಾಳೆ. ಆಗ ತಾನು ಮನಬಂದಂತೆ ಇರಲು ಅವಕಾಶವಿಲ್ಲ. ಅಲ್ಲದೆ ಒಂದು ಹೆಣ್ಣು ತನ್ನ ಮೇಲೆ ಜೋರು ಜಮಾಯಿಸುವುದು ಇವನಿಗೆ ಸುತರಾಂ ಇಷ್ಟವಿಲ್ಲ; ತಾನು ಹೆಣ್ಣನ್ನಾಳಬೇಕು. ಅದಕ್ಕೇ ಅವನು ಸುಷ್ಮಾಳನ್ನು ಮದುವೆಯಾಗಿದ್ದಾನೆ. ಸುರೇಶ ಸೋಫಾ ಮೇಲೆ ಒರಗಿಕೊಂಡು ಗಂಟೆಗಟ್ಟಲೆ ಟೀವಿ ನೋಡುತ್ತಿದ್ದರೂ ಸುಷ್ಮಾ ಚಕಾರ ಎತ್ತದೆ ಕೇಳಿದಾಗಲೆಲ್ಲ ಕಾಫಿ ಮಾಡಿಕೊಡುತ್ತಾಳೆ. ಹಾಗಾಗಿ ತನ್ನ ಸೋಮಾರಿತನವನ್ನು ಬಚ್ಚಿಡಲೆಂದೇ ಸುರೇಶ ಸುಷ್ಮಾಳಿಗಿಂತ ಬೇಗ ತಾಯಾರಾಗಿ, ಸಮಯದೊಡನೆ ಸ್ಪರ್ಧಿಸುತ್ತಿರುವ ಅವಳನ್ನು ಅಧಿಕಾರವಾಣಿಯಿಂದ ಆಕ್ಷೇಪಿಸುತ್ತಿರುತ್ತಾನೆ.

ಇನ್ನು, ಸುಷ್ಮಾ ಸುರೇಶನನ್ನು ಆಯ್ಕೆ ಮಾಡಿಕೊಂಡಿರುವುದಕ್ಕೂ ಇಂಥದ್ದೇ ಕಾರಣವಿದೆ. ಆಕೆ ಮೊದಲಿನಿಂದಲೂ ಓದಿನಲ್ಲಿ ಅಷ್ಟಕ್ಕಷ್ಟೆ. ಪದವಿ ಬಿ.ಇ. ಆದರೂ ಒಳ್ಳೆಯ ಕೆಲಸ ಸಿಗುವಷ್ಟು ಅಂಕಗಳಿರಲಿಲ್ಲ. ಸಿಕ್ಕರೂ ಹೊರಗೆ ಹೋಗಿ ಗಂಟೆಗಟ್ಟಲೆ ದುಡಿಯುವುದು ಆಕೆಯ ಕೈಲಾಗದು. ಆಕೆಯ ಸೋದರ ಸಂಬಂಧಿ ದಯಾನಂದ ಆಕೆಯನ್ನು ಮದುವೆಯಾಗಲು ತುದಿಗಾಲ ಮೇಲೆ ನಿಂತಿದ್ದ. ಅವನು ಇವಳಿಗೆ ಮನೆಗೆಲಸದಲ್ಲೂ ಸಹಾಯ ಮಾಡುತ್ತಿದ್ದ. ಆತನ ಸಂಪಾದನೆ ಹೊಟ್ಟೆ ತುಂಬುವಷ್ಟು ಇದ್ದರೂ ಹೋಟೆಲ್, ಶಾಪಿಂಗ್, ಪಾರ್ಟಿ ಎಂದು ಖರ್ಚು ಮಾಡುವಷ್ಟಿರಲಿಲ್ಲ. ಸುಷ್ಮಾಳಿಗೆ ಹೊರಗೆ ತಿರುಗುವ ಹುಚ್ಚು ಸ್ವಲ್ಪ ಹೆಚ್ಚೇ ಎನ್ನುವಷ್ಟಿದೆ. ಹೀಗಾಗಿ ಅವಳು ತಾನು ನೌಕರಿ ಮಾಡಲು ಪ್ರಸಂಗ ತರದಿರುವ, ಹಾಗೂ ತನ್ನ ಖರ್ಚಿಗಾಗಿ ಸಾಕಷ್ಟು ಹಣ ಗಳಿಸುವ ಸುರೇಶನನ್ನೇ ಮದುವೆಯಾಗಿದ್ದಾಳೆ. ಅದಿರಲಿ, ಗಂಡನ ಕಿರಿಕಿರಿಯನ್ನು ನಿಲ್ಲಿಸಲು ಆಕೆ ತನ್ನ ಅಲಂಕಾರಕ್ಕೆ ಕೊಡುವ ಸಮಯವನ್ನು ಕಡಿಮೆ ಮಾಡಬಹುದು, ಅಥವಾ ಪತಿಯನ್ನು ತಾನು ತಯಾರಾಗುವ ತನಕ ಬಾಯಿಮುಚ್ಚಿ ತೆಪ್ಪಗಿರಲು ಸೂಚಿಸಬಹುದು. ಯಾಕೆ ಆಕೆ ಹಾಗೆ ಮಾಡುತ್ತಿಲ್ಲ ಎಂದರೆ ಅಲ್ಲೂ ಒಂದು ರಹಸ್ಯವಿದೆ. ಸುಷ್ಮಾಳ ಶೈಕ್ಷಣಿಕ ಪ್ರತಿಭೆ ಅಷ್ಟಕ್ಕಷ್ಟೆ ಇರುವುದರಿಂದ ಆಕೆಗೆ ಕೀಳರಿಮೆಯಿದೆ. ತನ್ನ ಕೀಳರಿಮೆಯನ್ನು ಆಕೆ ಹೆಚ್ಚಿನ ಅಲಂಕಾರದಿಂದ ಭರ್ತಿ ಮಾಡಿಕೊಳ್ಳುತ್ತಿದ್ದಾಳೆ; ಈ ಅವಕಾಶ ಕೊಟ್ಟದ್ದಕ್ಕಾಗಿ ಗಂಡನಿಗೆ ಆಭಾರಿ ಆಗಿದ್ದಾಳೆ. ಆದ್ದರಿಂದಲೇ ಆಕೆ ಅವನ ಕಿರಿಕಿರಿಯನ್ನು ಸಹಿಸುತ್ತಿದ್ದಾಳೆ. ಹೀಗೆ ಇಬ್ಬರೂ ತಮ್ಮ ಸಂಗಾತಿಗಳನ್ನು ಆರಿಸಿಕೊಳ್ಳುವಾಗ ಸಮಸ್ಯೆಗಳನ್ನೂ ಆರಿಸಿಕೊಂಡಿದ್ದಾರೆ!

ಮನದಟ್ಟಾಯಿತಲ್ಲವೆ?